ದಿನಾಂಕ 26-10-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಪಿ.ವಿ.ಕೆ. ವಕೀಲರಿಂದಃ**

ನನ್ನ ತಾತನ ಹೆಸರು ಬೆಟ್ಟಪ್ಪ ಎಂದರೆ ಸರಿ. ಅವರಿಗೆ ಒಟ್ಟು 5 ಜನ ಮಕ್ಕಳು. ಅವರೆಂದರೆ 1) ಪರಸಪ್ಪ, 2) ಮೇಲಪ್ಪ, 3) ಬೋಜಪ್ಪ, 4) ಕೊಟ್ರಪ್ಪ ಹಾಗೂ 5) ಹನುಮಪ್ಪ (2 ನೇ ಪ್ರತಿವಾದಿ). 2 ನೇ ಪ್ರತಿವಾದಿಯು ಖಾಯಂ ಅರೆಮಲ್ಲಾಪುರ ವಾಸಿ ಎಂದರೆ ಸರಿ. ವಿಭಾಗ ಕೋರಿ ಓ.ಎಸ್.ನಂ.101/2022 ರಂತೆ ಮತ್ತೊಂದು ದಾವೆ ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಗೆ ಮಾಹಿತಿಯನ್ನು ನನ್ನ ತಾಯಿ ಗೀತಮ್ಮ ನೀಡಿರುತ್ತಾರೆ. ದಾವಾ ಸ್ವತ್ತು ನನ್ನ ಹೆಸರಿನಲ್ಲಿಯೇ ಇರುತ್ತದೆ. ನನ್ನ ತಂದೆಯ ಮರಣಾ ನಂತರ ನನ್ನ ಹೆಸರು ದಾಖಲಾಗಿರುತ್ತದೆ. ಸದರಿ ಸ್ವತ್ತು ನನ್ನ ತಂದೆ ಹಾಗೂ ಅವರ ಸಹೋದರರಿಗೆ ಆದ ವಿಭಾಗದಲ್ಲಿ ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ. ಯಾವ ವರ್ಷದಲ್ಲಿ ಬಂದಿರುತ್ತದೆ ಎಂದು ನನಗೆ ತಿಳಿದಿಲ್ಲ. ಸದರಿ ವಿಭಾಗದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಯಾವ ದಾಖಲೆಯ ಆಧಾರದ ಮೇಲೆ ನನ್ನ ತಂದೆಯ ಹೆಸರು ದಾಖಲಾಗಿರುತ್ತದೆ ಎಂದು ನನಗೆ ತಿಳಿದಿಲ್ಲ. ನಾನು ನನ್ನ ತಾಯಿ ಹಾಗೂ 1 ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ದಾಖಲೆ ಎಂದು ಹೇಳಲಾಗುವುದಿಲ್ಲ.

2. ತಾಲೂಕು ಪಂಚಾಯತಿ ಪ್ರಕರಣದ ಮೇಲ್ಮನವಿ ಸಂಖ್ಯೆ 3/2019-20 ರಲ್ಲಿ ಆದ ಆದೇಶವನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ಆದೇಶವನ್ನು ಪ್ರಶ್ನಿಸಿ ನಾನು ಜಿಲ್ಲಾ ಪಂಚಾಯತಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ 1/2020-21 ರಂತೆ ದಾಖಲು ಮಾಡಿದ್ದೆ ಎಂದರೆ ಸರಿ. ಮೇಲ್ಮನವಿ ಸಂಖ್ಯೆ 3/2019-20 ರಲ್ಲಿ ನನಗೆ ನೋಟೀಸ್ ಬಂದಿತ್ತು ಎಂದರೆ ಸರಿ. ಅದರಲ್ಲಿ ನಾನು ಹಾಜರಾಗಿರುತ್ತೇನೆ. ಯಾವ ಕಾರಣಕ್ಕಾಗಿ ಮೇಲ್ಮನವಿ ಸಲ್ಲಿಸಲಾಗಿತ್ತು ಎಂದು ನನಗೆ ತಿಳಿದಿಲ್ಲ. ಜಿಲ್ಲಾ ಪಂಚಾಯತಿ ಮೇಲ್ಮನವಿಯಲ್ಲಿ ಏನು ಆದೇಶ ಆಗಿರುತ್ತದೆ ಎಂದು ನನಗೆ ತಿಳಿದಿಲ್ಲ.

3. 2013 ರಿಂದ 2019 ರ ವರೆಗೂ ದಾವಾ ಸ್ವತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನಿಪಿ 1 ರ ಆಸ್ತಿ ಧೃಢೀಕರಣ ಪತ್ರದಲ್ಲಿ 2 ನೇ ಪ್ರತಿವಾದಿ ಹೆಸರು

ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಖಾಲಿ ಜಾಗ ಆಗಿರುತ್ತದೆ. ನಾನು ಹಾಗೂ 2 ನೇ ಪ್ರತಿವಾದಿ ಬೇರೆ ಬೇರೆಯಾಗಿ ವಾಸವಾಗಿರುತ್ತೇವೆ ಎಂದರೆ ಸರಿ. ನಾನು ವಾಸವಾಗಿರುವ ಮನೆಯ ಸಂಖ್ಯೆ ಹೇಳಲಾಗುವುದಿಲ್ಲ. ದಾವೆ ಹೂಡುವ ಮುನ್ನ ನಾನು 2 ನೇ ಪ್ರತಿವಾದಿಯನ್ನು ಬೇಟಿಯಾಗಿರುವುದಿಲ್ಲ. ಈ ದಾವೆಯಲ್ಲಿ 2 ನೇ ಪ್ರತಿವಾದಿಯನ್ನು ಯಾವ ಕಾರಣಕ್ಕೆ ಸೇರಿಸಲಾಗಿದೆ ಎಂದು ಹೇಳಲಾರೆ. 2 ನೇ ಪ್ರತಿವಾದಿಯು ಯಾವ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಹೇಳಲಾರೆ. ಸಾಕ್ಷಿದಾರರು ಮುಂದುವರೆದು ನಾನು ಅನಕ್ಷರಸ್ಥನಾಗಿದ್ದು ದಾಖಲೆಗಳ ಬಗ್ಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಇವತ್ತಿಗೂ ದಾವಾ ಸ್ವತ್ತು 2 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ವಿವಾದದ ಬಗ್ಗೆ ಪಂಚಾಯತಿ ಮಾಡಿರುವ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹಾಗೂ ವಾದಪತ್ರದಲ್ಲಿ ಬರೆಸಿರುವುದಿಲ್ಲ. ಯಾವುದೇ ಕಾರಣಕ್ಕೂ 2 ನೇ ಪ್ರತಿವಾದಿಯ ಹೆಸರು ದಾವಾ ಸ್ವತ್ತಿನ ದಾಖಲೆಗಳಲ್ಲಿ ನಮೂದು ಆಗಿರುವುದಿಲ್ಲ. ದಿನಾಂಕ 01-12-2020 ರಂದು ನಾನು 2 ನೇ ಪ್ರತಿವಾದಿಯನ್ನು ಯಾವುದೇ ಕಾರಣಕ್ಕೂ ಬೇಟಿಯಾಗಿರುವುದಿಲ್ಲ. 2014 ನೇ ಇಸವಿಯಲ್ಲಿ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಲು ನನ್ನ ತಂದೆ ಅಡಿಪಾಯ ಹಾಕಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ 2018 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. 2013 ರಿಂದ ಇಲ್ಲಿಯವರೆಗೂ 2 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಮಾಲೀಕನಾಗಿ ಸ್ವಾಧೀನದಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತಿಗೆ ಹೊಂದಿಕೊಂಡಂತೆ 2 ನೇ ಪ್ರತಿವಾದಿಗೆ ಸೇರಿದ ವಿಪಿಸಿ ನಂ.130/1 ರ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತು ಅಂದಾಜು ವಿಸ್ತೀರ್ಣ 1 ½ ಗುಂಟೆ ಆಗಿದ್ದು ಉದ್ದ-ಅಗಲ ನಿರ್ದಿಷ್ಟವಾಗಿ ತಿಳಿದಿಲ್ಲ. 2013 ರಲ್ಲಿ ನನ್ನ ತಂದೆ ತನ್ನ ಜೀವಿತ ಕಾಲಕ್ಕೆ ವರದಿ ನೀಡಿ 2 ನೇ ಪ್ರತಿವಾದಿಯ ಹೆಸರನ್ನು ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ಅಂದಿನಿಂದಲೂ ದಾವಾ ಸ್ವತ್ತು 2 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಇಂದಿಗೂ ದಾವಾ ಆಸ್ತಿಯ ತೆರಿಗೆಯನ್ನು 2 ನೇ ಪ್ರತಿವಾದಿಯೇ ಕಟ್ಟುತ್ತಿರುತ್ತಾರೆ ಎಂದರೆ ಸರಿಯಲ್ಲ. ದಾವೆ ಹೂಡಲು ಯಾವುದೇ ಕಾರಣ ಇಲ್ಲದಿದ್ದರೂ 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಹೂಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಯಾವ ವರ್ಷದಿಂದ ಯಾವ ವರ್ಷದ ವರೆಗೆ ದಾಖಲಾಗಿತ್ತು ಎಂದು ನಿರ್ದಿಷ್ಟವಾಗಿ ಹೇಳಲಾರೆ. ನಿಪಿ 4 ರ ರಸೀದಿಯನ್ನು ಈ ದಾವೆಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ

ನಾನು ಎಂದೂ ಇರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ತಂದೆ ಮೇಲಪ್ಪ ಎಂದು ಕನ್ನಡದಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರು ಹೆಬ್ಬೆಟ್ಟಿನ ಗುರುತು ಮಾಡುತ್ತಿದ್ದರು. ಈ ಸಂಬಂಧ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ದಾವಾ ಸ್ವತ್ತಿನ ತೆರಿಗೆಯನ್ನು ನಾನೇ ಕಟ್ಟುತ್ತಿದ್ದೆ. ಈ ಸಂಬಂಧ ನನ್ನ ಬಳಿ ದಾಖಲೆಗಳು ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೇ ತೊಂದರೆ ಇರುವುದಿಲ್ಲ. 2 ನೇ ಪ್ರತಿವಾದಿ ಹೆಸರು ಯಾವ ಕಾರಣಕ್ಕಾಗಿ ದಾಖಲಾಗಿದೆ ಎನ್ನುವುದರ ಬಗ್ಗೆ ನಾನು ಪಂಚಾಯತಿಯಲ್ಲಿ ವಿಚಾರಿಸಿರುವುದಿಲ್ಲ. ಈ ಸಂಬಂಧ ರಾಜಿ ಪಂಚಾಯತಿ ನಡೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿದರು ಎಂದು ನನಗೆ ನೆನಪಿಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.